ಬಿಸಿ ಭಕ್ಕರಿ ಬಡಿದು ಕಲಿಸಿಬಿಟ್ಟಿದ್ದಳು. ಈಗ ಮಕ್ಕಳಿಂದ ಮೊದಲು ಮಾಡಿ ಯಾರಿಗೂ ಚಪಾತಿ ಬೇಡ. ಅದಕ್ಕೇ ಅಡಿಗೆಯವರ ಹಾಡು. ಸರಿ... ಅದೂ ಆಯಿತು. ನಾನು ಸ್ವಲ್ಪ ಮೆದು, ಹೆಂಗರುಳು ಎಂದು ಮೊದಲೇ ಹೇಳಿದೆನಲ್ಲ. ಅವಳ ಕಣ್ಣಲ್ಲಿ ಕಂಬನಿ ಕಂಡೊಡನೆ ಕರಗಿ ಹೋಗುತ್ತಿದ್ದೆ. ಹೀಗೆ ಮೊದಲಿದ್ದ ಸಾಲಕ್ಕೆ ತಲೆ, ಬಾಲ ಎಲ್ಲಾ ಸೇರಿಸಿ ತಲೆಗೇರಿಸಿಕೊಂಡು ನಂಜು ನುಂಗಿದ ನಂಜುಂಡನಂತೆ ನಗುತ್ತಿದ್ದೆ. ಸಾಲ ಕೊಟ್ಟ ಸಾಲಗಾರರು, ಬ್ಯಾಂಕುಗಳು ವಸೂಲಿಗೆ ಬಂದರೆ ಏನೇನೋ ಸಬೂಬು ಹೇಳಿ ತಪ್ಪಿಸಿಕೊಳ್ಳುತ್ತಿದ್ದೆ. ತಲೆ ಮರೆಸಿಕೊಂಡು ತಿರುಗಾಡುತ್ತಿದ್ದೆ.

ಆದರೆ ಅದೆಷ್ಟು ದಿನ ನಡೆದೀತು? ಅರ್ಧಾಂಗಿ ಉಪಾಯ ಹೇಳಿದಳು. ಈಗ ನಮ್ಮ ಕಣ್ಣಿಗೆ ಆಧಾರವಾಗಿ ಕಾಣುತ್ತಿದ್ದುದು ನಮ್ಮ ದೊಡ್ಡ ಮನೆ 'ಬೃಂದಾವನ'ವೊಂದೇ. ಹುಬ್ಬಳ್ಳಿಯ ಪ್ರಮುಖ ಬಡಾವಣೆಯಾದ ವಿಜಯನಗರದಲ್ಲಿ ಅಂದಿನ ಕಾಲದಲ್ಲಿ ಎಂಟು ಗುಂಟೆ ಜಾಗದಲ್ಲಿ ಕಟ್ಟಲಾಗಿತ್ತು. ನಾಲ್ಕು ಬೆಡ್‌ರೂಮುಗಳು, ವಿಶಾಲವಾದ ಹಾಲು, ವರಾಂಡಾ, ಅಡಿಗೆ ಮನೆ, ದೇವರ ಮನೆ, ಕೋಟಿ ಖೋಲಿ(ಉಗ್ರಾಣ)ಯನ್ನು ಒಳಗೊಂಡಿತ್ತು. ಆಗಲೇ ಎರಡು ಬಾಥ್‌ರೂಮುಗಳಿದ್ದವು. ಮೇಲೆ ಬಿಸಿನೆಸ್‌ಗಾಗಿ ಕಟ್ಟಿದ ಎರಡು ರೂಮುಗಳೂ ಸೇರಿದ ಭರ್ಜರಿ ಮನೆ. ಸುತ್ತೆಲ್ಲ ಹೂದೋಟ, ಹಿಂದೆ ಬಾಳೆ, ತೆಂಗು ಮಾವು ನಳನಳಿಸುತ್ತಿದ್ದವು. ಆಗ ಎಂಟು ಲಕ್ಷಕ್ಕೇ ಗೃಹಪ್ರವೇಶವೂ ಸೇರಿ ಮುಗಿದ ಮನೆಗೆ ಈಗ ಐವತ್ತೆಂಟು ಲಕ್ಷವಾದರೂ ಬರುತ್ತಿತ್ತು. ಆದರೆ ಅದು ಪಿತ್ರಾರ್ಜಿತವಲ್ಲವೇ? ಅದರಲ್ಲಿ ಮೂರೂ ಮಕ್ಕಳಿಗೂ ಪಾಲಿತ್ತು. ಈಗ ಅದು ಅವ್ವನ ಹೆಸರಲ್ಲಿದೆ. ಅವಳ ಬಳಿ ದುಡ್ಡೇನೂ ಜಾಸ್ತಿ ಇಲ್ಲ. ಅದಕ್ಕೆ "ಮನಿ ಬರಿಸಿಗೊಂಡು ಬಿಡ್ರಿ. ಅದರ ಮ್ಯಾಲೆ ಸಾಲಾ ತಗದು ಉಳಕಿ ಸಾಲಾ ತೀರಸಿದ್ರಾತು. ಸಾಕಾಗಲಿಲ್ಲಾಂದ್ರ ಮಾರಿಬಿಡೋಣ. ಬಿಸಿನೆಸ್ ಬೆಳಸ್ಲಿಕ್ಕೂ ಆಗ್ತದ. ಮುಂದನೂ ಅವ್ವನ್ನ ನಾವ ನೋಡಕೋಬೇಕು. ಅವರೇನು ಸೌದಿಗೆ ಹೋಗುದುಲ್ಲ ಅಥವಾ ಚಂಡೀಗಢಕ್ಕೂ ಹೋಗುದುಲ್ಲ. ನಮ್ಮ ಕಷ್ಟ ಕಾಲದಾಗ ತೊಗೊಂಡ್ರ ಏನ ತಪ್ಪು?" ಎಂಬ ತರ್ಕ ಮುಂದಿಟ್ಟಳು. ನನಗೂ ಆ ಸಮಯದಲ್ಲಿ ಸರಿ ಎನಿಸಿತು. ಆದರೂ "ಒಮ್ಮೆ ಅಕ್ಕ, ಅಣ್ಣಗ ಕೇಳಿಬಿಡೋಣು" ಎಂದೆ. "ಹುಚ್ಚ ಇದ್ದೀರಿ ನೀವು. ಬರೋ ರೊಕ್ಕಾ ಯಾರು ಬಿಡ್ತಾರ? ಪಾಲಾದ್ರ ನಮಗೆಷ್ಟು ಇಪ್ಪತ್ತು ಲಕ್ಷ ಸುದ್ಧಾ ಬರುದುಲ್ಲ. ಯಾತಕ್ಕ ಸಾಕಾಗ್ತದ? ಸಾಲ ಸೈತ ತೀರೂದಿಲ್ಲ. ಸುಮ್ಮನ ನಾ ಹೇಳಿಧಂಗ ಕೇಳ್ರಿ. ಅಂದ್ರನ ನಾ  ತವರಮನಿಯಿಂದ ತಿರಗಿ ಬರೋದು. ಇಲ್ಲಾಂದ್ರ... ಇಲ್ಲಾ" ಎಂಬ ಗುಡುಗು, ಮಳೆ ಸಹಿತದ ಧಮಕಿಗೆ ನಾನು ಹೆದರಿ ಕಂಗಾಲಾಗಿದ್ದೆ. ಹೀಗಾಗಿ ಅವ್ವನ ಸಹಿ ಮೋಸದಿಂದಲಾದರೂ ತೆಗೆದುಕೊಳ್ಳಲು ಸಿದ್ಧನಾಗಿದ್ದೆ. ಸೀಬಾಯಿಯ ದಿನವೇ ಅವ್ವ ನೆಂಟರಿಷ್ಟರ ಮುಂದೆ "ಮನಿ, ರೊಕ್ಕಾ ಎಲ್ಲಾದ್ರಾಗೂ ಮೂರು ಸಮಾ ಪಾಲು ಮಾಡು ಅಂತ ಇವರಿದ್ದಾಗನ ಹೇಳ್ಯಾರ" ಎಂದು ಘಂಟಾಘೋಷವಾಗಿ ಹೇಳಿಯಾಗಿತ್ತು. ಇನ್ನು ಉಳಿದಿರುವದೊಂದೇ ದಾರಿ. 'ಭಾರ್ಯಾಭಾಷಾ...' ಎನ್ನುತ್ತ ತಲೆಬಾಗಿದೆ.

ಈಗ ಹಿನ್ನೆಲೆಯೆಲ್ಲ ಅರ್ಥವಾಯಿತಲ್ಲ. ಇನ್ನು ಶಿವನ ಸಾಕ್ಷಾತ್ಕಾರಕ್ಕೆ ಬರೋಣ. ಸೋಮವಾರದ ದಿನವನ್ನೇ ಆರಿಸಿದೆ. ಬೆಳಗ್ಗೆ ಅಡಿಗೆಯವಳು, ನರ್ಸು ಬಂದು ಹೋದ ಮೇಲೆ ಮನೆಯಲ್ಲಿ ನಾನು ಅವ್ವ ಇಬ್ಬರೇ. ಸುಜಾತ ನನಗೆ ಗುರುತರವಾದ ಕೆಲಸ ಒಪ್ಪಿಸಿ ಮಕ್ಕಳೊಡನೆ ರಜೆಗೆಂದು ತವರಿಗೆ ಹೋಗಿದ್ದಳಲ್ಲ. ವಿಧಿಯಿಲ್ಲದೇ ಅವಳ ಆಜ್ಞೆಯನ್ನು ಪಾಲಿಸಬೇಕಿತ್ತು. ಮೆಲ್ಲನೆ ಅವ್ವನ ಬಳಿ ಹೋಗಿ "ಅವ್ವಾ, ಫ್ಯಾಕ್ಟರೀದು ಸ್ವಲ್ಪ ಕೆಲಸದ. ನಾ ಹೊರಗ ಹೋಗಿ